(17) (3)

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ

**-: ಸೂಚನೆ :-**

ಭೂರಹಿತರಿಗೆ ಹಾಗೂ ಬಡ ರೈತರಿಗೆ ಸರ್ಕಾರವು ಹಲವು ವಿವಿಧ ಯೋಜನೆಯಡಿಯಲ್ಲಿ ಹಿಂದಿನಿಂದ ಇಂದಿನವರೆಗೂ ಕೆಲವು ಷರತ್ತುಗಳನ್ನು ವಿಧಿಸಿ ಭೂಮಿಯನ್ನು ಮಂಜೂರು ಮಾಡಿಕೊಡುತ್ತಿದ್ದು, ಸದರಿ ಭೂಮಿಯನ್ನು 15 ವರ್ಷಗಳ ಕಾಲ ಯಾರಿಗೂ ಪರಭಾರೆ ಮಾಡುವಂತಿಲ್ಲ ಎಂಬ ನಿರ್ಬಂಧನೆ ವಿಧಿಸಿದ್ದು, ಅದರನ್ವಯ ಅನೇಕ ರೈತರಿಗೆ ಭೂಮಿ ಮಂಜೂರಾಗಿ 20-25 ವರ್ಷಗಳಾಗಿದ್ದರೂ ಪಹಣಿಯಲ್ಲಿ ಪಿ.ನಂ. ನಮೂದಿಸಿದ್ದು ಹಾಗೂ ಸದರಿ ಜಮೀನುಗಳು ಇದುವರೆಗೂ ಸಹ ದುರಸ್ತಿಯಾಗದೇ ರೈತರು ಭೂಮಿಯನ್ನು ಕಷ್ಟ ಸಂದರ್ಭದಲ್ಲಿ ಯಾರಿಗೂ ಸಹ ಪರಭಾರೆ ಮಾಡಲು ಅವಕಾಶ ಆಗದೇ ಇರುವುದರಿಂದ ಅನೇಕ ರೈತರುಗಳಿಗೆ ಪಹಣಿಯಲ್ಲಿ ಪಿ.ನಂ. ನಮೂದು ಮತ್ತು ದುರಸ್ತಿ ಆಗದೇ ರೈತರುಗಳಿಗೆ ತೊಂದರೆಗಳಾಗಿರುವ ಕುರಿತು ಮಾನ್ಯ ಕಂದಾಯ ಸಚಿವರ ಬಳಿ ವಿಷಯವನ್ನು ಪ್ರಸ್ತಾಪಿಸುವ ಬಗ್ಗೆ.

**-: ಹೇಳಿಕೆ :-**

ರಾಜ್ಯ ಸರ್ಕಾರವು ವಿವಿಧ ಕಲ್ಯಾಣ ಯೋಜನೆಗಳನ್ವಯ ರಾಜ್ಯದ ಭೂರಹಿತರಿಗೆ ಹಿಂದಿನಿಂದಲೂ ಭೂಮಂಜೂರಾತಿಯನ್ನು ಮಾಡುತ್ತಿದೆ. ಮಂಜೂರಾದ ಜಮೀನುಗಳನ್ನು ಕಚ್ಚಾ ನಕಾಶೆಯಿಂದ ಗುರುತಿಸಿ ಮಂಜೂರಿ ಮಾಡುತ್ತಿದ್ದು, ಮಂಜೂರಿ ನಂತರ ಸದರಿ ಮಂಜೂರಿಯ ಬಗ್ಗೆ ಮ್ಯುಟೇಷನ್ ಅಂಗೀಕಾರವಾಗಿ ಪಹಣಿಯಲ್ಲಿ ದಾಖಲಿಸಲಾಗುತ್ತಿದೆ. ಈ ರೀತಿಯಾಗಿ ಮಂಜೂರಾದ ಜಮೀನುಗಳ ಬಗ್ಗೆ ನಂತರದಲ್ಲಿ ದುರಸ್ತಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸರ್ಕಾರಿ ಜಮೀನಿನಲ್ಲಿ ಆದ ಅಭಿವೃದ್ಧಿ ಕೆಲಸಗಳಾದ ರಸ್ತೆ,ಕೆರೆ, ಆಶ್ರಯ ಕಾಲೋನಿ ಇತರೆ ಕೆಲಸಗಳ ಬಾಬ್ತು ಬಳಸಲಾದ ಜಮೀನಿನ ವಿವರ ದಾಖಲೆಗಳಲ್ಲಿ ಇಂಡೀಕರಿಸಲಾಗಿರುವುದಿಲ್ಲ. ಒಂದು ಸರ್ವೆ ನಂಬರಿನಲ್ಲಿ ಲಭ್ಯ ಜಮೀನನ್ನು ಒಂದೇ ಬಾರಿಗೆ ಮಂಜೂರಿಗೆ ಒಳಪಡಿಸದೇ ಹಲವಾರು ಬಾರಿ ಮಂಜೂರಿ ಪ್ರಕ್ರಿಯೆಗೆ ಒಳಪಡಿಸಿದ್ದು, ಹಂತ ಹಂತವಾಗಿ ಮಂಜೂರಾಗುತ್ತಿದೆ. ಅಲ್ಲದೆ ಹಲವು ಬಾರಿ ಮ್ಯುಟೇಷನ್ ವಿಳಂಬ ದುರಸ್ತಿ ವಿಳಂಬದಿಂದಾಗಿ ದುಬಾರಿ ಮಂಜೂರಿಗಳಾಗಿದೆ. ವಾಸ್ತವವಾಗಿ ಲಭ್ಯ ಜಮೀನಿಗಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಭೂಮಂಜೂರಿಯಾಗಿರುತ್ತದೆ. ಇದರಿಂದಾಗಿ ಜಮೀನು ಸ್ಥಿತಿಯಂತೆ ದುರಸ್ತಿ ಪಡಿಸುವುದು ಕ್ಲಿಷ್ಟಕರ ಹಾಗೂ ದುಸ್ತರವಾಗುತ್ತಿದೆ. ಈ ಪರಿಸ್ಥಿತಿಯನ್ನು ಮನಗಂಡ ಸರ್ಕಾರವು ಒಂದು ಸರ್ವೆ ನಂಬರಿನಲ್ಲಿ ಮಂಜೂರಾಗಿರುವ ಎಲ್ಲಾ ಜಮೀನುಗಳನ್ನು ಒಂದೇ ಬಾರಿಗೆ ದುರಸ್ತಿಪಡಿಸುವ ಬಗ್ಗೆ, ನಮೂನೆ 1 ರಿಂದ 5 ಮತ್ತು ನಮೂನೆ 6-10 ಭರ್ತಿ ಮಾಡುವ ವ್ಯವಸ್ಥೆಯನ್ನು ಜಾರಿ ಮಾಡಿದೆ.

ಮುಂದುವರೆದು, ತುರ್ತು ಮತ್ತು ವಿಶೇಷ ಸಂದರ್ಭದಲ್ಲಿ ದುರಸ್ತಿ ಅವಶ್ಯಕವಾದ ಅರ್ಜಿದಾರರಿಗೆ ನಮೂನೆ 1 ರಿಂದ 5 ಭರ್ತಿ ಮಾಡಿದ ನಂತರ ಎಲ್ಲ ಮಂಜೂರಿದಾರರೊಂದಿಗೆ ದುರಸ್ತಿ ಮಾಡುವಲ್ಲಿ ವಿಳಂಬವಾಗುತ್ತಿದೆ ಎಂದು ಸರ್ಕಾರವು ಮನಗಂಡು, ಸದರಿ ವ್ಯವಸ್ಥೆಯನ್ನು ಸರಳೀಕರಿಸಿ ಸದರಿ ಸಂಬಂಧದ ಅಧಿಕಾರವನ್ನು ತಹಶೀಲ್ದಾರರಿಗೆ ಪ್ರತ್ಯಾಯೋಜಿಸಲಾಗಿದೆ.

ಆದಾಗ್ಯೂ ಪಿ.ನಂಬರ್ ತೆಗೆಯಲು / ದರಖಾಸ್ತು ಮಂಜೂರಿ ಪೋಡಿ ಮಾಡಲು ಈ ಕಂಡ ತೊಂದರೆಗಳು ಉದ್ಭವಿಸುತ್ತಿವೆ :-

1. ಆಕಾರಬಂದು & ಪಹಣಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.
2. ಪಹಣಿ ಕಾಲಂ 3 & 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿರುವುದು.
3. ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು(ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗದಿರುವುದು.
4. ಭೂಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಸೂಚನೆ ಗಳನ್ವಯ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯವಾಗದೇ ಇರುವುದು .
5. ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು. ಮತ್ತು ಜಮೀನಿನ ಆಕಾರ ಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ ಪಹಣಿ ಸರಿಪಡಿಸು ವಲ್ಲಿ ತೊಂದರೆ ಇರುವುದು ಇತ್ಯಾದಿ.

6. ಜಮೀನಿನ ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು. ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು.
7. ಅಳತೆ ವೇಳೆ ಜಮೀನಿನ ಹಕ್ಕು & ಗಡಿ ವಿಚಾರದಲ್ಲಿ ತಕರಾರು ಇರುವುದ ರಿಂದ, & ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ.
8. ಸರ್ಕಾರಿ/ಪರವಾನಗಿ ಭೂಮಾಪಕರಿಗೆ ಪ್ರತಿ ಮಾಹೆ ನಿಗಧಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗುತ್ತಿರುವುದರಿಂದ.
9. COVID-19 ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯದಲ್ಲಿ ಲಾಕಡೌನ್ ಇದ್ದುದ್ದರಿಂದ ಈ ಸಮಯದಲ್ಲಿ ಅಳತೆ ಕೆಲಸ ಸ್ಥಗಿತಗೊಂಡಿದ್ದು, ಆದರೆ ಅರ್ಜಿಗಳನ್ನು ಸ್ವೀಕರಿಸಲಾಗಿದ್ದರಿಂದ ಹೆಚ್ಚಿನ ಪ್ರಕರಣಗಳು ಬಾಕಿ ಉಳಿದಿರುತ್ತವೆ.

ಇನ್ನೂ ಹಲವು ಕಾರಣಗಳಿಂದ ದರಖಾಸ್ತು ಪೋಡಿ ಮಾಡಲು ವಿಳಂಬವಾಗಿರುವುದರಿಂದ ಹಲವಾರು ವರ್ಷಗಳಿಂದ ರಾಜ್ಯದಲ್ಲಿ ದರಖಾಸ್ತು ಪ್ರಕರಣಗಳು ಪೋಡಿಯಾಗದೆ ಬಾಕಿ ಉಳಿದಿರುತ್ತವೆ. ಇದರಿಂದಾಗಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:-

1. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್.ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು, ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದೆ. ಸರದಿ ಸಾಲಿನಂತೆ ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರುಗಳಿಗೆ ಕಡತಗಳು ಹಂಚಿಕೆಯಾದಂತೆ ಸರದಿ ಸಾಲಿನಂತೆ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶ ವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.
ಿದ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಬಗ್ಗೆ ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.
3. ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಸೂಚಿಸಿದ್ದು, ಅದರಂತೆ, ಕ್ರಮ ವಹಿಸಲಾಗುತ್ತಿದೆ.
4. ಮಂಜೂರಿ ಜಮೀನುಗಳ ಪೋಡಿ ದುರಸ್ತಿ ಕಾರ್ಯವನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರ ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದ ಸಹಯೊಗದಲ್ಲಿ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದೆ.
5. ಪಹಣಿಯಲ್ಲಿನ ಮಾಲೀಕರ ಹೆಸರು, ಪೌತಿ ಖಾತೆ ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂಧ ಕಂದಾಯ ಇಲಾಖೆಯಿಂದ ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ .
6. ಸರ್ಕಾರದ ಸೂಚನೆಯನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.
7. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.
8. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೇಲಿನ ಸುಧಾರಣಾ ಕ್ರಮಗಳಿಂದ ದರಖಾಸ್ತು ಪೋಡಿ ಸಂಬಂಧ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲಾಗುತ್ತಿದೆ.

**ಸಂಖ್ಯೆ: ಕಂಇ 111 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು